# ಗುರು ಕಂಡ ಕನಸು

## *ಲೋಕ ಕಂಡ ನನಸು*



ಎಂ. ಆರ್. ವಿಶ್ವನಾಥರೆಡ್ಡಿ

ಸೆಪ್ಟೆಂಬರ್ ೧೧ ಸ್ವಾಮಿ ವಿವೇಕಾನಂದರು ಜಗತ್ತಿನ ದೃಷ್ಟಿಗೆ ಗೋಚರವಾದ ಒಂದು ಪರ್ವದಿನ. ಜಗತ್ತಿನ ವಿವಿಧ ಪತ್ರಿಕೆಗಳು, ಮಹನೀಯರು ಅವರನ್ನು ಹೇಗೆ ಗುರುತಿಸಿದರು ಎಂಬುದನ್ನು ವಿವರಿಸಿರುವ ಶ್ರೀ ವಿಶ್ವನಾಥರೆಡ್ಡಿಯವರು ನಿವೃತ್ತ ಕನ್ನಡ ಪ್ರಾಧ್ಯಾಪಕರು ಮತ್ತು ಆಶ್ರಮದ ನಿಕಟ ಭಕ್ತರು.

"**ನರೇಂದ್ರ** ಅತ್ಯಂತ ಉಚ್ಚ ಅಂತಸ್ತಿಗೆ ಸೇರಿದವನು" "ಅವನಲ್ಲಿ ಪುರುಷ ಸತ್ತ್ವವಿದೆ" "ಅಲ್ಲಿಗೆ ಅಷ್ಟೊಂದು ಜನ ಬರುತ್ತಾರೆ! ಅವನಂತಹವರು ಬೇರೆ ಯಾರೂ ಇಲ್ಲ." "ನರೇಂದ್ರನು ತುತ್ತ ತುದಿಯ ಆಲಯ; ಅಖಂಡಾಲಯ" "ನರೇಂದ್ರ ಲೋಕಶಿಕ್ಷಣ ಮಾಡಬೇಕಾಗಿದೆ... ಅವನ ಮೂಳೆಗಳೇ ಆ ಕೆಲಸವನ್ನು ಮಾಡಿ ಬಿಡುತ್ತವೆ."—ಇವೆಲ್ಲ ನರೇಂದ್ರನನ್ನು ಕುರಿತು ಶ್ರೀರಾಮಕೃಷ್ಣರು ಹೇಳಿದ ಭವಿಷ್ಯವಾಣಿಗಳು. ಪರಮಹಂಸರು ನರೇಂದ್ರನಿಗಾಗಿ "ಹುಚ್ಚು ಹಿಡಿದು ಅಳುವುದು", ಅವನನ್ನು ಹೀಗೆ ಹೊಗಳುವುದು ಕೆಲವು ಭಕ್ತರಿಗೆ ತೀರ ಅತಿ ಅನ್ನಿಸಿತ್ತೇನೋ. ಇದರಿಂದಾಗಿಯೇ ಒಮ್ಮೆ ಪ್ರಾಣಕೃಷ್ಣ ಎಂಬ ಭಕ್ತ ಪರಮಹಂಸರಿಗೆ ಕೈಮುಗಿದು 'ಮಹಾಶಯರೇ, ಆತ ಕೇವಲ ಸಾಮಾನ್ಯ ವಿದ್ಯಾವಂತ; ಆತನಿಗಾಗಿ ಏಕೆ ನೀವು ಇಷ್ಟೊಂದು ವ್ಯಸ್ತರಾಗುತ್ತಿದ್ದೀರಿ?" ಎಂದಿದ್ದ. ಅದಕ್ಕೆ ಮೌನವೇ ಶ್ರೀರಾಮಕೃಷ್ಣರ ಉತ್ತರವಾಗಿತ್ತು.

ತಮ್ಮ ಲೀಲಾಪ್ರಸಂಗವನ್ನು ಮುಗಿಸಿ ಮಹಾಸಮಾಧಿಗೆ ತೆರಳಲು ಇನ್ನು ಸರಿಯಾಗಿ ಐದು ತಿಂಗಳಿವೆ ಎನ್ನುವಾಗ ಪರಮಹಂಸರು "ನರೇಂದ್ರನ ಕಡೆ ನೋಡುತ್ತಿದ್ದಾರೆ. ಆತನನ್ನು ನೋಡುತ್ತಾ ನೋಡುತ್ತಾ ಇದ್ದ ಹಾಗೆ ಆನಂದದಿಂದ ತುಂಬಿ ತುಳುಕಾಡಲಾರಂಭಿಸಿದ್ದಾರೆ. ಭಕ್ತರ ಕಡೆ ನೋಡಿ ಹೇಳುತ್ತಿದ್ದಾರೆ, 'ಭೇಷ್!' "

ಶ್ರೀರಾಮಕೃಷ್ಣರ ದರ್ಶನ ಕಾಲದೇಶಗಳನ್ನು ಮೀರಿದುದು. ಅವರು ತ್ರಿಕಾಲದರ್ಶಿಗಳು. ಯುಗಾವತಾರರು ತಮ್ಮ ಭಾವದ ಕಣ್ಣಿನಿಂದ ಕಂಡ ನರೇಂದ್ರನನ್ನು ಲೋಕವು ತನ್ನ ಹೊರಗಣ್ಣಿನಿಂದ ನೋಡಿದುದು, "ನರೇಂದ್ರನಂತಹವನು ಬೇರೆ ಯಾರೂ ಇಲ್ಲ" ಎಂಬುದನ್ನು ಕಂಡುಕೊಂಡದ್ದು ಕೆಲವು ವರ್ಷಗಳ ನಂತರವೇ. ಅಂದರೆ ೧೮೯೩ನೇ ವರ್ಷದ ಸೆಪ್ಟೆಂಬರ್ ತಿಂಗಳ ೧೧ರಂದು ಕಲ್ಕತ್ತೆಯ ಕಾಶೀಪುರದ ತೋಟದಿಂದ ಸಹಸ್ರಾರು ಮೈಲುಗಳ ದೂರದ, ಸಾಗರದಾಚೆಯ ಅಮೆರಿಕಾದ ಶಿಕಾಗೊ ನಗರದಲ್ಲಿ ಅವತಾರ ವರಿಷ್ಠನ ಭವಿಷ್ಯವಾಣಿ ಸತ್ಯಸ್ಯ ಸತ್ಯವಾಗಿ ಲೋಕವಿಖ್ಯಾತವಾಯಿತು.

ಅಂದು ನರೇಂದ್ರ, ಸ್ವಾಮಿ ವಿವೇಕಾನಂದರಾಗಿ ಶಿಕಾಗೊ ವಿಶ್ವ ಧರ್ಮ ಸಮ್ಮೇಳನದ ವೇದಿಕೆಯ ಮೇಲೆ ನಿಂತಿದ್ದಾರೆ. "ಗುಲಾಮೀ ದೇಶವೊಂದರ ದೀನದರಿದ್ರರ ಪ್ರತಿನಿಧಿಯಾಗಿ ಬಂದವನ ಮುಖದಲ್ಲಿ ಇಷ್ಟೊಂದು ಆತ್ಮ ವಿಶ್ವಾಸವೇ? ಯಾರಿವನು?" ಎಂದು ಸಭಾಸದರು ಯೋಚಿಸಿರಬಹುದು. "ಇಂತಹ ಸಭೆಗೆ—ಅದೂ ವಿದ್ವಜ್ಜನರಿಂದ, ಪವಿತ್ರ ಕ್ರೈಸ್ತ ಧರ್ಮದ ಮಹಾನ್ ನಾಯಕರಿಂದ ತುಂಬಿರುವ ಸಭೆಗೆ—ಈ ತರುಣನು ಏನು ಹೇಳಿಯಾನು?" ಎಂದು ಅಲ್ಲಿನ ಅನೇಕರು ಉಪೇಕ್ಷೆ ಮತ್ತು ತಿರಸ್ಕಾರದಿಂದ ವಿವೇಕಾನಂದರನ್ನು ನೋಡಿರಬಹುದು. ಆದರೆ ಸ್ವಾಮೀಜಿಯ ಬಾಯಿಂದ **"ಅಮೆರಿಕಾದ ನನ್ನ ಸಹೋದರಿಯರೇ ಮತ್ತು ಸಹೋದರರೇ "** ಎಂಬ ಮಾತುಗಳು ಹೊರಬೀಳುತ್ತಿದ್ದಂತೆ ಸಭೆಯಲ್ಲಿ ಹಠಾತ್ ಪರಿವರ್ತನೆ; ಸುದೀರ್ಘ ಕರತಾಡನ; ಹರ್ಷೋದ್ಗಾರಗಳು.

ಅಂದು ಸ್ವಾಮೀಜಿ ಮಾತನಾಡಿದುದು ಕೇವಲ ಮೂರು ನಿಮಿಷಗಳು ಮಾತ್ರ! ಆ ಕೆಲವೇ ನಿಮಿಷಗಳ ಅಲೌಕಿಕವೆನ್ನುವಂತಹ ವಾಣಿಯು ಭಾರತವು ಶತಮಾನಗಳ ಕಾಲ ಅನುಭವಿಸಿದ ಅವಮಾನ, ಶೋಷಣೆ ತಿರಸ್ಕಾರಗಳ ಅಂತ್ಯಕ್ಕೆ ಕಾರಣೀಭೂತವಾಯಿತು. ಮತೀಯ

*ಶೀರ್ಷಿಕೆಯ ಚಿತ್ರ*

೧೮೯೩ರಲ್ಲಿ ವಿಶ್ವಧರ್ಮ ಸಮ್ಮೇಳನ ನಡೆದ ಕಟ್ಟಡವಾದ ಚಿಕಾಗೋದ ಆರ್ಟ್ ಇನ್‌ಸ್ಟಿಟ್ಯೂಟ್.

> ಸ್ವಾಮಿ ವಿವೇಕಾನಂದರು ಎದ್ದು ನಿಂತರು—ಪುರುಷ ಸೌಂದರ್ಯದಿಂದ ಕೂಡಿದ ಘನಗಂಭೀರ ಆಕೃತಿ, ಗೈರಿಕವಸನ, ಅದೇ ಬಣ್ಣದ ತುರಾಯಿ, ಬರಸೆಳೆಯುವ, ಶಕ್ತಿಯುತ, ಪ್ರಶಾಂತ ಮುಖಮುದ್ರೆ. ಅವರು ಹೇಳಿದರು : "ಅಮೆರಿಕದ ಸಹೋದರಿಯರೆ ಮತ್ತು ಸಹೋದರರೆ." ಕೂಡಲೆ ಶ್ರೋತೃಗಳಿಂದ ಜೋರಾಗಿ ಕರತಾಡನ—ಅಂತರಂಗದಿಂದ ಹೊರ ಹೊಮ್ಮಿದ ಆ ಭ್ರಾತೃಭಾವಕ್ಕೆ ಮಣಿಯು ವಂತೆ, ಮತ್ತು ಉಪನ್ಯಾಸಕನ ವ್ಯಕ್ತಿತ್ವದಲ್ಲಿ ತಮಗಿರುವ ಆಸಕ್ತಿಯ ದ್ಯೋತಕವಾಗಿ. —Rev. L. P. Mercer

ದುರಹಂಕಾರ ಹಾಗೂ "ನಾಗರಿಕತೆ"ಯ ಸೊಕ್ಕಿನಿಂದ ಬೀಗುತ್ತಿದ್ದ ಪಾಶ್ಚಾತ್ಯರ ಕಣ್ಣು ತೆರೆಸಿದುದಲ್ಲದೆ ಅವರಲ್ಲಿ ಭಾರತದ ಆಧ್ಯಾತ್ಮಿಕ ಹಾಗೂ ಹಿಂದೂ ನಾಗರಿಕತೆಯ ಶ್ರೀಮಂತಿಕೆಯ ಬಗ್ಗೆ ಗೌರವಾಸಕ್ತಿಗಳನ್ನು ಮೂಡಿಸಿತು. ಒಬ್ಬ ವ್ಯಕ್ತಿ. ಒಬ್ಬನೇ ಒಬ್ಬ ವ್ಯಕ್ತಿಯು ಒಂದು ರಾಷ್ಟ್ರವು, ಒಂದು ಜನಾಂಗವು ಕಳೆದು ಕೊಂಡಿದ್ದ ಆತ್ಮಗೌರವವನ್ನು ಆತ್ಮ ವಿಶ್ವಾಸಗಳನ್ನು ಕೆಲವೆ ನಿಮಿಷಗಳಲ್ಲಿ ಮತ್ತೆ ತಂದುಕೊಟ್ಟನೆಂಬುದು ಇತಿಹಾಸವು ಎಂದೂ ಕಾಣದ, ಕೇಳದ ಅದ್ಭುತ. ಅದೊಂದು ಪವಾಡ.



ಗುಲಾಮೀ ದೇಶವೊಂದರ ದೀನದರಿದ್ರರ ಪ್ರತಿನಿಧಿಯಾಗಿ ಬಂದವನ ಮುಖದಲ್ಲಿ ಇಷ್ಟೊಂದು ಆತ್ಮವಿಶ್ವಾಸವೇ ? ಯಾರಿವನು?

ಅಂದಿನ ಸಭೆಯಲ್ಲಿ ವಿವೇಕಾನಂದರು ಕುಬ್ಜರ ನಡುವಿನ ಗೊಮ್ಮಟನಂತೆ ವಿರಾಜಿಸಿರಬೇಕು. ಸಂಕುಚಿತ ಮತೀಯ-ಧಾರ್ಮಿಕ ಕೂಪ ಮಂಡೂಕಗಳಿಗೆ ಸ್ವಾಮೀಜಿ ಒಂದು ವಿಶಾಲ ಸಾಗರದಲ್ಲಿ ಸ್ವೇಚ್ಛೆಯಿಂದ ವಿಹರಿಸುವ ಮಹಾ ತಿಮಿಂಗಲದಂತೆ ಕಂಡುಬಂದಿರಬೇಕು. ಒಣಮರದಂತಹ ಶುಷ್ಕ ವಿದ್ವಾಂಸರ ಮಧ್ಯೆ ರಸಭರಿತಫಲ ನೀಡುವ ಮಹಾವೃಕ್ಷದಂತೆ ಕಂಡಿರಬೇಕು.

ಇದೇನು ಉತ್ಪ್ರೇಕ್ಷೆಯಲ್ಲ. ಅವತಾರ ವರಿಷ್ಠನು ಒಳಗಣ್ಣಿನಿಂದ ನೋಡಿದುದನ್ನು ಜಗತ್ತು ತನ್ನ ಹೊರ ಗಣ್ಣುಗಳಿಂದ ಹೇಗೆ ಕಂಡಿತೆಂಬುದನ್ನು ಗಮನಿಸೋಣ.

ಹದಿನೇಳು ದಿನಗಳ ಧರ್ಮಸಮ್ಮೇಳನದಲ್ಲಿ ಸ್ವಾಮೀಜಿ ಉಪನ್ಯಾಸ ಮಾಡಿದುದು ಕೇವಲ ಆರು ಬಾರಿ. ಆದರೆ ಅವುಗಳ ಒಟ್ಟು ಪರಿಣಾಮವು ಪಾಶ್ಚಾತ್ಯರ ಮೇಲೆ ಆದುದು ಹೀಗೆ: "ಈತನದು ದೈವದತ್ತವಾದ ವಾಣಿ" ಎಂದು ನ್ಯೂಯಾರ್ಕ್ ಕ್ರಿಟಿಕ್ ಪತ್ರಿಕೆ ಬಣ್ಣಿಸಿದರೆ, "ಈತ ಜಗತ್ತಿನ ಅತ್ಯಂತ ಸುಶಿಕ್ಷಿತರಲ್ಲಿ ಒಬ್ಬ" ಎಂದು **ಶಿಕಾಗೊ ಟೈಮ್ಸ್** ಪತ್ರಿಕೆ ಪ್ರಶಂಸಿಸಿತು.

ಸ್ವಾಮೀಜಿಯವರ ಮಾತುಗಳಿಂದ ಶ್ರೋತೃಗಳು ಮಂತ್ರಮುಗ್ಧರಾದುದನ್ನು ಗಮನಿಸಿದ ಸಮ್ಮೇಳನದ ಕಾರ್ಯದರ್ಶಿಗಳು "ಇನ್ನು ಮುಂದಿನ ದಿನಗಳಲ್ಲಿ ಸ್ವಾಮೀಜಿಯವರ ಉಪನ್ಯಾಸವು ಕಡೆಯದಾಗಿರುತ್ತದೆ" ಎಂದು ಪ್ರಕಟಿಸಿದರು. ಇದಕ್ಕೆ ಕಾರಣ ನೀರಸ ಉಪನ್ಯಾಸಗಳಿಂದ ಬೇಸತ್ತು ಸಭಾಸದರು ಹೊರಗೆ ಹೋಗದೆ ಇರಲಿ ಎಂಬುದು. ಈ ಅಂಶವನ್ನು **ನಾರ್ತ್‌ಹ್ಯಾಂಪ್ಟನ್ ಡೇಲಿ ಹೆರಾಲ್ಡ್** ಪತ್ರಿಕೆ ಹೀಗೆ ವರದಿ ಮಾಡಿತು: "ಈ ಮಹಾನ್ ವ್ಯಕ್ತಿಯ ಕೇವಲ ೧೫ ನಿಮಿಷಗಳ ಭಾಷಣ ಕೇಳಲು ಸಾವಿರಾರು ಜನ ಗಂಟೆಗಟ್ಟಲೆ ಕಾಯುತ್ತಿದ್ದರು." "ಇವರ ಉಪನ್ಯಾಸ ಕೇಳಿದ ಮೇಲೆ ಜ್ಞಾನಿಗಳ ನಾಡಾದ ಭಾರತಕ್ಕೆ ಕ್ರೈಸ್ತಮತ ಪ್ರಚಾರಕರನ್ನು ಕಳುಹಿಸುವುದು ಎಂತಹ ಮೂರ್ಖತನ ಎಂಬುದು ಈಗ ಅರಿವಾಗುತ್ತಿದೆ. ಇಡೀ ಧರ್ಮ ಸಮ್ಮೇಳನದಲ್ಲಿ ಈತ ನಿಸ್ಸಂಶಯವಾಗಿಯೂ ಅತ್ಯಂತ ದೊಡ್ಡ ವ್ಯಕ್ತಿ" ಎಂದು ನ್ಯೂಯಾರ್ಕ್ ಹೆರಾಲ್ಡ್ ವರದಿ ಮಾಡಿತು.

ಧರ್ಮಾಂಧತೆಯನ್ನು ತೊರೆದು ಧರ್ಮಸಹಿಷ್ಣುಗಳಾಗುವುದೇ ಒಂದು ದೊಡ್ಡ ಸಾಧನೆ ಎಂಬ ಪಾಶ್ಚಾತ್ಯ ಉದಾರವಾದಿಗಳಿಗೆ ಸ್ವಾಮೀಜಿಯವರು "ಈಗ ಬೇಕಾಗಿರುವುದು ಧರ್ಮ ಸಹಿಷ್ಣುತೆಯಲ್ಲ, ಸರ್ವ ಧರ್ಮಗಳ ಅಂಗೀಕಾರ; ಸರ್ವ ಧರ್ಮ ಸಮನ್ವಯ" ಎಂದು ಹೇಳಿದರು. ಹಿಂದೂಗಳು ಆದಿಯಿಂದಲೂ ಸರ್ವಧರ್ಮಗಳನ್ನು ಸಮನ್ವಯ ಮಾಡಿಕೊಂಡಂತಹವರು ಎಂಬುದನ್ನು ಅಂಗೀಕರಿಸಿದ ಡೇಲಿ ಫ್ರೀ ಪ್ರೆಸ್ ಪತ್ರಿಕೆ "ವಿವೇಕಾನಂದರು ಹಿಂದೂ ಅಲ್ಲ, ಬೌದ್ಧರೂ ಅಲ್ಲ, ಮುಸ್ಲಿಮರೂ ಅಲ್ಲ. ಅವರು ಎಲ್ಲ ಧರ್ಮಗಳ ಅತ್ಯುತ್ತಮವಾದುದರ ಮೂರ್ತ ಸ್ವರೂಪ. ಈತನ ಬಾಯಲ್ಲಿ ಸಾರ್ವಕಾಲಿಕ ಸತ್ಯವಿದೆ; ಸರ್ವಧರ್ಮ ಸಮನ್ವಯತೆಯಿದೆ... ಈತ ಪಂಡಿತರಲ್ಲಿ ಪಂಡಿತ" ಎಂದು ಘೋಷಿಸಿದರೆ, **ಅಯೋವಾ ಸ್ಟೇಟ್ ರಿಜಿಸ್ಟರ್** ಪತ್ರಿಕೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ "ಎಲ್ಲ ನಿಜವಾದ ಕ್ರೈಸ್ತರ ಹೃದಯಗಳನ್ನು ವಿವೇಕಾನಂದರು ಆಕ್ರಮಿಸಿಕೊಂಡಿದ್ದಾರೆ" ಎಂದು ಎದೆತುಂಬಿ ಹೇಳಿತು.

ಇನ್ನು ಮುಂದೆ ಭಾರತದೊಂದಿದೆ, ಭಾರತೀಯರೊಂದಿಗೆ ಅಹಂಕಾರ ಹಾಗೂ ತಿರಸ್ಕಾರದಿಂದ ವರ್ತಿಸುವ ಕಾಲ ಮುಗಿಯಿತು ಎಂಬುದು ಸರ್ ಹಿರಾಮ್ ಮ್ಯಾಕ್ಸಿಮ್ ಎಂಬ ಪ್ರಸಿದ್ಧ ವಿಜ್ಞಾನಿಯು ಹೇಳಿದ ಈ ಮಾತುಗಳಲ್ಲಿ ಧ್ವನಿತವಾಗಿದೆ: "ವಿವೇಕಾನಂದರಿಗೆ ಇಡೀ ಅಮೆರಿಕದ ಎಲ್ಲ ಕ್ರೈಸ್ತಪಾದ್ರಿಗಳ ಹಾಗೂ ಮತ ಪ್ರಚಾರಕರ ಧರ್ಮ ಮತ್ತು ಅಧ್ಯಾತ್ಮ ಜ್ಞಾನಕ್ಕಿಂತ ಬಹಳಷ್ಟು ಹೆಚ್ಚು ಗೊತ್ತಿದೆ. ಬೆಕ್ಕು ಇಲಿಗಳೊಂದಿಗೆ ಚೆಲ್ಲಾಡುವ ರೀತಿಯಲ್ಲಿ

ಈತ ನಮ್ಮ ಧರ್ಮೋಪದೇಶಕರೊಂದಿಗೆ ಚೆಲ್ಲಾಟವಾಡುತ್ತಿದ್ದಾನೆ."

ಧರ್ಮ ಸಮ್ಮೇಳನದ ವೈಜ್ಞಾನಿಕ ಗೋಷ್ಠಿಯ ಅಧ್ಯಕ್ಷರಾಗಿದ್ದ ಮರ್ವಿನ್ ಮೇರಿ ಸ್ನೆಲ್ ಎಂಬುವರು "ಈ ಸಮ್ಮೇಳನದ ಮೇಲೆ, ಹಿಂದೂಧರ್ಮವನ್ನು ಪ್ರತಿನಿಧಿಸಿದ ವಿವೇಕಾನಂದರು ಮಾಡಿದಂತಹ ಪ್ರಭಾವ, ಇನ್ನಾವ ಧರ್ಮದ ಪ್ರತಿನಿಧಿಯೂ ಮಾಡಿಲ್ಲ... ತೀರ ಸಾಂಪ್ರದಾಯಿಕ ಕ್ರೈಸ್ತರೂ ಸಹ 'ವಿವೇಕಾನಂದರು ಪುರುಷಶ್ರೇಷ್ಠರು' ಎಂದು ವರ್ಣಿಸುತ್ತಾರೆ" ಎಂದು ಹೇಳಿದ ಮಾತು ಇಡೀ ಅಮೆರಿಕದ ಜನರ ಪರವಾಗಿ ಹೇಳಿದಂತಹ ಮಾತಾಗಿದೆ.

"ಹಿಂದೂ ಚಂಡಮಾರುತ", "ಪುರುಷೋತ್ತಮ", "ಮತ್ತೊಬ್ಬ ಕ್ರಿಸ್ತ", "ಮತ್ತೊಬ್ಬ ಬುದ್ಧ" —ಇವೆಲ್ಲ ಅಮೆರಿಕದ ಸಾಮಾನ್ಯ ಜನರ ಬಾಯಿಂದ ಬಂದ ಆಣಿಮುತ್ತುಗಳಲ್ಲಿ ಕೆಲವು ಮಾತ್ರ.

ಇತ್ತ ಭಾರತದಲ್ಲಿ ಶಿಕಾಗೋ ಸಮ್ಮೇಳನಕ್ಕೆ ಮುನ್ನ ವಿವೇಕಾನಂದರು ಭಾರತದ ಕೆಲವೇ ಜನರನ್ನು ಹೊರತುಪಡಿಸಿ ಒಬ್ಬ ಅನಾಮಧೇಯರೇ ಆಗಿದ್ದರು. ಆದರೆ ಅಮೆರಿಕದಲ್ಲಿ ಸ್ವಾಮೀಜಿಯವರ ದಿಗ್ವಿಜಯದ ಸುದ್ದಿಯು ಭಾರತದಲ್ಲಿ ಅವರನ್ನು ಏಕಾಏಕಿ ರಾಷ್ಟ್ರಪುರುಷನನ್ನಾಗಿಸಿತು. ವಿದ್ಯಾವಂತ ಭಾರತೀಯರಲ್ಲಿ ಇನ್ನೆಲ್ಲಿಲ್ಲದ ಉತ್ಸಾಹ, ಧೈರ್ಯ ಮತ್ತು ಆತ್ಮವಿಶ್ವಾಸವನ್ನುಂಟುಮಾಡಿತು. ಜೀವಚ್ಛವ ಸದೃಶ ರಾಷ್ಟ್ರದ ನರನಾಡಿಗಳಲ್ಲಿ ಪ್ರಾಣಶಕ್ತಿ ಹರಿಯಿತು; ನಿರ್ವಿಣ್ಣ ಜನಾಂಗಕ್ಕೆ ಅಮೃತ ಸೇಚನವಾಯಿತು.

> ರಾಷ್ಟ್ರದ ಇತಿಹಾಸದಲ್ಲಿ ಒಂದು ಗಣನೀಯ ಪಾತ್ರವಹಿಸಲಿಕ್ಕಾಗಿಯೇ ಈತ ಜನಿಸಿದ್ದಾನೆ.
>
> — ಇಂಡಿಯನ್ ಮಿರರ್ ಪತ್ರಿಕೆ

ಇಂಡಿಯನ್ ಮಿರರ್ ಪತ್ರಿಕೆಯ ಸಂಪಾದಕ ನರೇಂದ್ರನಾಥ ಸೇನರು "ಇದೇನು ಕನಸೆ? ಹಿಂದೂಗಳು ಒಂದು ರಾಷ್ಟ್ರವಾಗಿ ಮರುಹುಟ್ಟು ಪಡೆದರು.... ರಾಷ್ಟ್ರದ ಇತಿಹಾಸದಲ್ಲಿ ಒಂದು ಗಣನೀಯ ಪಾತ್ರ ವಹಿಸಲಿಕ್ಕಾಗಿಯೇ ಈತ ಜನಿಸಿದ್ದಾನೆ" ಎಂದು ಉದ್ಘೋಷಿಸಿದರು.

ಪ್ರಸಿದ್ಧ ವಿದ್ವಾಂಸರೂ, ಇಂಡಿಯನ್ ನೇಷನ್ ಪತ್ರಿಕೆಯ ಸಂಪಾದಕರೂ ಆಗಿದ್ದ ಪ್ರೊ. ನಾಗೇಂದ್ರನಾಥ ಘೋಷ್ ಅವರು "ಜಗತ್ತಿನ ಇತಿಹಾಸದಲ್ಲಿ ಇಷ್ಟೊಂದು ಹಠಾತ್ತಾದ, ಪರಿಣಾಮಕಾರಿಯಾದ ವಿಜಯ ಮತ್ತೊಂದಿಲ್ಲ. ಈ ಹಿಂದೂ ಉಪದೇಶಕ ಕೋಟ್ಯಂತರ ಜನರ ಶತಮಾನಗಳ ಧಾರ್ಮಿಕ ಮೌಢ್ಯಗಳನ್ನು ಒಂದೇ ಏಟಿಗೆ ಕಳೆದುದಲ್ಲದೆ ಅವರಿಗೆ ತಮ್ಮ ಧರ್ಮದ ನಿಜ ಸ್ವರೂಪವನ್ನು, ಅಂತಸ್ಸತ್ವವನ್ನು ತೋರಿಸಿಕೊಟ್ಟ" ಎಂದು ಹೇಳಿ ಸ್ವಾಮೀಜಿಯವರ ಅಂತಸ್ಸತ್ವವನ್ನು ಸರಿಯಾಗೇ ಗುರುತಿಸಿದರು.

ಸ್ವಾಮೀಜಿಯವರ ಸಾಮಾಜಿಕ ಮತ್ತು ರಾಷ್ಟ್ರೀಯ ಚಿಂತನೆಗಳ ಆಳವನ್ನು ಮೊದಲಿಗೆ ಗುರುತಿಸಿ ಪ್ರೋತ್ಸಾಹಿಸಿದವರು ಮದ್ರಾಸಿನ

> ..ಪಾಶ್ಚಾತ್ಯರಿಗೆ ಭಾರತದ ಹಿರಿಮೆಯನ್ನು ಮನದಟ್ಟು ಮಾಡಿಸಲು ವಿವೇಕಾನಂದರಿಗಿಂತ ಯೋಗ್ಯ, ಭವ್ಯ, ಶ್ರೇಷ್ಠ ಪ್ರತಿನಿಧಿ ಮತ್ತೊಬ್ಬರು ಸಿಗಲಾರರು.
>
> — ಹಿಂದೂ ಪತ್ರಿಕೆ

(ಈಗಿನ ಚೆನ್ನೈ) ಜನ. ಮದ್ರಾಸಿನ ಪ್ರತಿಷ್ಠಿತ ಹಿಂದೂ ದಿನಪತ್ರಿಕೆಯ ಸಂಪಾದಕರಾಗಿದ್ದ ಸುಬ್ರಮಣ್ಯ ಅಯ್ಯರ್ ಅವರು ಹಿರಿಯ ಸಮಾಜ ಸುಧಾರಕರೂ, ಕಾಂಗ್ರೆಸ್ ಸ್ಥಾಪಕರಲ್ಲೊಬ್ಬರೂ ಆಗಿದ್ದಂತಹ ಮಹನೀಯರು. ಅವರು ಹಿಂದೂ ಪತ್ರಿಕೆಯ ಸಂಪಾದಕೀಯ ಲೇಖನದಲ್ಲಿ "ಈ ದೇಶದ ಅಪಮಾನ, ದೈನ್ಯತೆಗಳ ಕರಾಳ ರಾತ್ರಿ ಮುಗಿದು ಹೊಸ ಬೆಳಕು ಬರುವ ಕಾಲ ಸನ್ನಿಹಿತವಾಗಿದೆ... ಪಾಶ್ಚಾತ್ಯರಿಗೆ ಭಾರತದ ಹಿರಿಮೆಯನ್ನು ಮನದಟ್ಟು ಮಾಡಿಸಲು ವಿವೇಕಾನಂದರಿಗಿಂತ ಯೋಗ್ಯ, ಭವ್ಯ, ಶ್ರೇಷ್ಠಪ್ರತಿನಿಧಿ ಮತ್ತೊಬ್ಬರು ಸಿಗಲಾರರು" ಎಂದು ಹೇಳಿ ಎಲ್ಲ ದೀನರ ಪರವಾಗಿ ಸ್ವಾಮೀಜಿಯವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.

ಸ್ವಾಮೀಜಿಯವರ ಸಾಧನೆ ಸಿದ್ಧಿಗಳನ್ನು ಕನ್ನಡಿಗರೂ ಗುರುತಿಸಿದರು. ಬೆಂಗಳೂರಿನಲ್ಲಿ ಅಂದಿನ ದಿವಾನರಾಗಿದ್ದ ಶೇಷಾದ್ರಿ ಅಯ್ಯರ್ ಅವರ ಅಧ್ಯಕ್ಷತೆಯಲ್ಲಿ ಸಮಾಜದ ಎಲ್ಲ ವರ್ಗಗಳ ಜನರ ಸಭೆ ಸೇರಿತು. ದಿವಾನರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ, "ಸತತ ಉಗ್ರನಿಂದನೆಗೆ, ಟೀಕೆಗೆ, ಭರ್ತ್ಸನೆಗೆ ಗುರಿಯಾಗಿರುವ ಹಿಂದೂ ಧರ್ಮದ ರಕ್ಷಣೆಗೆ ಈ ಮಹಾನ್ ಸಂನ್ಯಾಸಿಯು ಏಕಾಂಗಿಯಾಗಿ, ಅಸಹಾಯ ಶೂರನಾಗಿ, ಕಟಿಬದ್ಧನಾಗಿ ನಿಂತು ಈ ಸನಾತನ ಧರ್ಮದ ಶಕ್ತಿಯನ್ನು, ಹಿರಿಮೆಯನ್ನು ಎತ್ತಿ ತೋರಿಸಿದ್ದಾರೆ" ಎಂದು ಹೇಳಿ ಸ್ವಾಮೀಜಿಗೆ ಸಮಸ್ತ ಕನ್ನಡಿಗರ ನಮನಗಳನ್ನು ಸಮರ್ಪಿಸಿದರು.

ಶಿಕಾಗೋ ಉಪನ್ಯಾಸ ಮತ್ತು ತದನಂತರ ಸ್ವಾಮೀಜಿಯವರ ದಿಗ್ವಿಜಯವು ಆಗತಾನೇ ರೂಪುಗೊಳ್ಳುತ್ತಿದ್ದ ಭಾರತದ ಸ್ವಾತಂತ್ರ್ಯಸಂಗ್ರಾಮಕ್ಕೆ ಚಾಲನೆಯನ್ನು ನೀಡಿತು ಎಂಬ ಅಂಶ ಅನೇಕರ ಗಮನಕ್ಕೆ ಬಾರದಿರುವುದು ವಿಷಾದದ ಸಂಗತಿ. ಮನೋರಂಜನ ಗುಹ ಎಂಬ ಬಂಗಾಲದ ಸ್ವದೇಶೀ ಚಳುವಳಿಯ ನಾಯಕರು ಈ ಅಂಶವನ್ನು ಮೊದಲು ಗುರುತಿಸಿದವರು. "ಸ್ವಾಮೀಜಿಯವರಿಗಿಂತ ಮೊದಲು ಅಮೆರಿಕ ಮತ್ತು ಯೂರೋಪ್‌ಗಳಿಗೆ ಹೋಗಿದ್ದ ಯಾವ ಭಾರತೀಯನೂ ಭಾರತೀಯ ಧರ್ಮಗಳ ಸಂದೇಶವನ್ನು ಕೊಂಡೊಯ್ದಿರಲಿಲ್ಲ. ಇದರಲ್ಲಿ ಮೊದಲಿಗರು ಸ್ವಾಮೀಜಿಯವರು. ಅವರ ಈ ಯಾತ್ರೆಯಿಂದಾಗಿ ಭಾರತಕ್ಕೆ ರಾಜಕೀಯ ಲಾಭವಾಗಲಿದೆ" ಎಂದು ಹೇಳಿ ಅವರು ಸ್ವಾಮೀಜಿಯವರ ಪ್ರವರ್ತಕತೆಗೆ ಗೌರವ ಸಲ್ಲಿಸಿದರು.

ಆ ಕಾಲದ ಭಾರತದ ಅಗ್ರಮಾನ್ಯ ರಾಜಕೀಯ ಮುತ್ಸದ್ದಿಯಾಗಿದ್ದ ಸುರೇಂದ್ರನಾಥ ಬ್ಯಾನರ್ಜಿ ಅವರು "ಸ್ವಾಮೀಜಿಯವರಿಗೆ ಗೌರವ ಸಲ್ಲಿಸುವುದು ಒಂದು ರಾಷ್ಟ್ರೀಯ ಕರ್ತವ್ಯ. ಸ್ವಾಮೀಜಿ

> ಧರ್ಮಸಮ್ಮೇಳನದಲ್ಲಿ ವಿವೇಕಾನಂದರಷ್ಟು ಇತರರ ಗಮನವನ್ನು ಸೆಳೆದವರು ಮತ್ತು ಆಸಕ್ತಿಯನ್ನು ಕೆರಳಿಸಿದವರು ಯಾರೂ ಇರಲಿಲ್ಲ.
>
> —*Rays of Light from All Lands, Ed., by E.C. Towne.*

ಯವರ ತ್ಯಾಗಮಯ ಜೀವನವು ದೇಶದ ತರುಣರಿಗೆ ಸ್ಫೂರ್ತಿಯನ್ನುಂಟುಮಾಡಲಿದೆ" ಎಂದು ಹೇಳಿ ಸ್ವಾಮೀಜಿಯವರ ವಿಚಾರಗಳು ಮುಂದಿನ ತರುಣ ಪೀಳಿಗೆಗೆ ಚಿರಂತನ ದಾರಿದೀವಿಗೆಯಾಗಲಿದೆ ಎಂಬ ಅಂಶವನ್ನು ಆಗಲೇ ಮನಗಂಡಿದ್ದರು.

ಸ್ವತಂತ್ರ ಭಾರತದ ಕಟ್ಟಕಡೆಯ ಗೌರ್ನರ್ ಜನರಲ್ ಆಗಿದ್ದ ಚಕ್ರವರ್ತಿ ರಾಜಗೋಪಾಲಾಚಾರಿಯವರು ಸಮಸ್ತ ಭಾರತೀಯರ ಭಾವಪೂರ್ಣ ಕೃತಜ್ಞತೆಗಳನ್ನು ಸ್ಮರಣೀಯವಾದ ಈ ಮಾತುಗಳಲ್ಲಿ ಧ್ವನಿಸಿದ್ದಾರೆ: "ಸ್ವಾಮೀಜಿ ಹಿಂದೂ ಧರ್ಮವನ್ನೂ ಭಾರತವನ್ನೂ ರಕ್ಷಿಸಿದರು. ಇವರಿಲ್ಲದಿದ್ದಿದ್ದರೆ ನಮ್ಮ ಧರ್ಮವೂ ಉಳಿಯುತ್ತಿರಲಿಲ್ಲ; ನಾವು ಸ್ವಾತಂತ್ರ್ಯವನ್ನೂ ಗಳಿಸುತ್ತಿರಲಿಲ್ಲ. ಈ ರಾಷ್ಟ್ರ ಅವರಿಗೆ ಚಿರಋಣಿಯಾಗಿರಬೇಕು."

ಸ್ವಾಮೀಜಿಯವರ ಅಮೆರಿಕ ಮತ್ತು ಯೂರೋಪ್‌ಗಳಲ್ಲಿನ ಪ್ರಚಂಡ ಯಶಸ್ಸು ಗುರುದೇವ ಶ್ರೀರಾಮಕೃಷ್ಣರ ಸಂಕಲ್ಪ ಮತ್ತು ಶ್ರೀಮಾತೆಯವರ ಕೃಪಾಶೀರ್ವಾದಗಳ ಫಲ. ಅಷ್ಟೇ ಅಲ್ಲ, ಸ್ವಯಂ ಸ್ವಾಮೀಜಿಯವರ ಅಂತರ್ದೃಷ್ಟಿಗೆ ಈ ದಿಗ್ವಿಜಯವು ಮೊದಲೇ ಸ್ಪಷ್ಟವಾಗಿ ಗೋಚರವಾಗಿತ್ತು. ಅಮೆರಿಕಾದಲ್ಲಿ ವಿಶ್ವಧರ್ಮ ಸಮ್ಮೇಳನ ನಡೆಯಲಿದೆ ಎಂಬ ವಿಷಯ ತಿಳಿದ ಕೂಡಲೇ ಅವರು "ಈ ಧರ್ಮಸಮ್ಮೇಳನ ನಡೆಯಲಿರುವುದು ನನಗಾಗಿಯೇ" ಎಂದು ಸ್ವಾಮಿ ತುರೀಯನಂದಜಿಯವರಿಗೆ ಹೇಳಿದ್ದರು.

ಶ್ರೀರಾಮಕೃಷ್ಣರು ತಮ್ಮ ಅತೀಂದ್ರಿಯ ದೃಷ್ಟಿಯಿಂದ ಕಂಡು ಉದ್ಗರಿಸಿದ "ಅಲ್ಲಿಗೆ ಅಷ್ಟೊಂದು ಜನ ಬರುತ್ತಾರೆ. ಅವನಂತಹವರು ಬೇರೆ ಯಾರೂ ಇಲ್ಲ" ಎಂಬ ದೈವೀ ಕನಸು ಅದೆಷ್ಟು ಪರಿಪೂರ್ಣ ನನಸಾಗಿ, ಭಾರತವನ್ನು ತನ್ಮೂಲಕ ಜಗತ್ತನ್ನು ಬೆಳಗಿಸಿತು ಎಂಬುದು ಈಗ ಲೋಕವಿಖ್ಯಾತವಾಗಿದೆ, ಇತಿಹಾಸದ ಭಾಗವಾಗಿದೆ. ◆

---

# ಭಾರತೀಯ ಹಬ್ಬ

ಡಾ.ಕೆ.ಎಲ್. ಪ್ರಸನ್ನಾಕ್ಷಿ

**ಹಬ್ಬಗಳ ಆಚರಣೆ ಮನರಂಜನೆ ಮತ್ತು ಆಡಂಬರಗಳಿಗೆ ಒಂದು ಸಂದರ್ಭವಾಗದೆ ಆಧ್ಯಾತ್ಮಿಕ ಪ್ರಗತಿಗೆ ಪೂರಕವಾಗಿರಬೇಕು ಎಂಬುದನ್ನು ಶಬ್ದಾರ್ಥದ ಮೂಲಕವೇ ವಿವರಿಸಿ ಹೇಳಿರುವ ಶ್ರೀಮತಿ ಪ್ರಸನ್ನಾಕ್ಷಿಯವರು ಸಂಸ್ಕೃತದಲ್ಲಿ ವಿಶೇಷ ಪಾಂಡಿತ್ಯವುಳ್ಳವರು.**

**ಭಾರತೀಯರು,** ಭಾ = ಪ್ರಕಾಶ, ಜ್ಯೋತಿರೂಪಿ ಭಗವಂತನಲ್ಲಿ ರತರಾದವರು, ಅಂದರೆ ಆ ಜ್ಯೋತಿಯನ್ನು ಅಂತರಂಗದಲ್ಲಿ ಒಂದಲ್ಲ ಒಮ್ಮೆ ಕಾಣಲೇಬೇಕು, ಅದೇ ಜೀವನದ ಧ್ಯೇಯ, ಅದೇ ಬಾಳಾಟದ ಸಾರ್ಥಕ್ಯ ಎಂದು ತಿಳಿದು ಆ ಜ್ಯೋತಿದರ್ಶನಕ್ಕಾಗಿ ಹಂಬಲಿಸಿದವರು, "ಜೀವ"ದ ಸಕಲವಿಧ ಅಭಿವೃದ್ಧಿಗಾಗಿ ಚಿಂತಿಸಿದವರು.

ಅಭಿವೃದ್ಧಿ ಯಾರಿಗೆ ಬೇಡ? ಎಲ್ಲರೂ ಹೋರಾಡುವುದೇ ಅದಕ್ಕಲ್ಲವೆ? ಮಗು ಹುಟ್ಟಿದುದು, ಹುಟ್ಟಿದ ಹಾಗೆಯೇ ಇದ್ದರೆ ಗಾಬರಿ, ಆತಂಕ ಉಂಟಾಗುತ್ತದೆ. ತಕ್ಷಣ ವೈದ್ಯರ ಬಳಿ ಓಡಿಹೋಗುತ್ತಾರೆ. ಆಯಾ ವಯಸ್ಸಿನಲ್ಲಿ ಮಗು, ನೋಡುವುದು, ನಗುವುದು, ಮಗುಚಿಕೊಳ್ಳುವುದು, ಅಂಬೆಗಾಲಿಡುವುದು ಇತ್ಯಾದಿ ಮಾಡಬೇಕು, ಬೆಳೆಯುತ್ತಾ ಹೋಗಬೇಕು. ಈ ಯಾವುದರಲ್ಲಿ ಸ್ವಲ್ಪ ತಡವಾದರೂ ಮನಸ್ಸು ಕಳವಳಗೊಳ್ಳುವುದು. ತಜ್ಞವೈದ್ಯರ ಸಲಹೆಗೆ ತವಕಿಸುತ್ತಾರೆ. ಶರೀರದಿಂದ ಬೆಳೆದ ಮಗುವಿನಲ್ಲಿ ವಯಸ್ಸಿಗನುಗುಣವಾಗಿ ಬುದ್ಧಿಯೂ ಬೆಳೆಯಬೇಕು, ಅದಕ್ಕೆ ತಕ್ಕಂತೆ ಪ್ರತಿಕ್ರಯಿಸಬೇಕು. ನಾಲ್ಕು ವರ್ಷದ ಮಗು ಒಂದು ವರ್ಷದ ಮಗುವಿನ ಸಂವೇದನೆಯನ್ನೋ ಬುದ್ಧಿಯನ್ನೋ ಹೊಂದಿದ್ದರೆ ಅದು ಕಳವಳವನ್ನು ಉಂಟುಮಾಡುತ್ತದೆ. ಹೀಗೆ ಮಗುವಿನ ಶಾರೀರಿಕ, ಬೌದ್ಧಿಕ, ಮಾನಸಿಕ ಸ್ಥಿತಿಗಳ ಬೆಳವಣಿಗೆಗೆ ಸಕಲರೂ ಹಂಬಲಿಸುವುದು ಎಲ್ಲರಿಗೂ ತಿಳಿದ ವಿಷಯ. ಮಕ್ಕಳು ಸುಖಿಗಳಾಗಿ ಬದುಕಲಿ, ಯಾವುದೇ ವಿಧ ಶ್ರಮ ಬೇಡ, ಎಂದು ಬಯಸಿ ಅವರಿಗಾಗಿ ಬಂಗಲೆ (ಮನೆ) ಕಾರು ಇತ್ಯಾದಿಗಳನ್ನು ಒದಗಿಸಿಕೊಡುವವರೂ ಇದ್ದಾರೆ. ತಮಗಂತೂ ಇಲ್ಲ ಮಕ್ಕಳಾದರೂ ಈ ಎಲ್ಲಾ ಭೋಗಗಳನ್ನು ಪಡೆದು ಮಜಾ ಮಾಡಿಕೊಂಡು ಬದುಕಲಿ ಎಂದು ಹಾರೈಸುವವರೂ, ಹೊಟ್ಟೆಬಟ್ಟೆಗೆ ಕಟ್ಟಿ ಅವರಿಗಾಗಿ ಕೂಡಿಡುವವರೂ ಇದ್ದಾರೆ.

ಆದರೆ ಈ ಎಲ್ಲಕ್ಕೂ ಅತೀತವಾದ ಮತ್ತೊಂದು ಅಭಿವೃದ್ಧಿಯೂ ಉಂಟು, ಅದನ್ನು ಗಮನಿಸಬೇಕೆಂದು ಸನಾತನ ಆರ್ಯಋಷಿಗಳು ತೋರಿಸಿಕೊಟ್ಟಿದ್ದಾರೆ—**ಯೋ ಬುದ್ಧೇಃ ಪರತಸ್ತು ಸಃ** (ಯಾರು ಬುದ್ಧಿಗಿಂತಲೂ ಶ್ರೇಷ್ಠನೊ ಅವನು) ಎಂದು ಸಾರಿದ್ದಾರೆ. ತಾವು ಕಂಡುಂಡ ಬೆಳಕನ್ನು, ಆನಂದಾನುಭೂತಿಯನ್ನು, ಬ್ರಹ್ಮಾನಂದವನ್ನು ನಮಗೂ ಉಣಬಡಿಸಿರುವರು. ನಮ್ಮ ಆತ್ಮೋನ್ನತಿಗೆ ನಾವು ಪ್ರಯತ್ನಿಸಬೇಕು; ಗುರಿಮುಟ್ಟುವವರೆಗೆ, ಆ ಬೆಳಕನ್ನು ಕಂಡು ಆನಂದಿಸುವವರೆಗೆ, ಪರಬ್ರಹ್ಮತತ್ತ್ವದ ನೆಲೆ ಸೇರುವವರಗೆ ಸಾಗುತ್ತಾ ಅಭಿವೃದ್ಧ (ಮೂಲದೆಡೆಗೆ ಬೆಳೆಯುವುದು)ರಾಗಬೇಕು ಎಂದು ಆ ಮುನಿಗಳು ಬಯಸಿದರು.